
# ನೋವಿಲ್ಲದೆ ಹಲ್ಲು ಕೀಳುವ ವೈದ್ಯ ರಾಮಣ್ಣವರ

■ ನೇತ್ರಶೇಖರ ಉದಯಶಂಕರ್



ದಂತಚಿಕಿತ್ಸಾ ಶಿಬಿರವೊಂದರಲ್ಲಿ ಇಕ್ಕಳವೊಂದರಿಂದಲೇ ಹಲ್ಲುಕೀಳುವ ಡಾ. ರಾಮಣ್ಣವರ

**ಅರಿವಳಿಕೆಯ ಚುಚ್ಚುಮದ್ದನ್ನಾಗಲೀ, ದುಬಾರಿ ಉಪಕರಣಗಳನ್ನಾಗಲೀ ಬಳಸದೆ ಇವರು ಕೇವಲ ಒಂದು ಇಕ್ಕಳದಿಂದ ಕಳಕ್ಕೆಂದು ಎಂಥ ಗಟ್ಟಿ ಹಲ್ಲನ್ನಾದರೂ ಕಿತ್ತು ತೆಗೆಯುತ್ತಾರೆ. ಇದು ದಂತಕಥೆಯಲ್ಲ.**

ಈತ 76 ವರ್ಷದ ವೃದ್ಧ. ಸರ ಸರ ಓಡಾಡುವ ಈತನ ಮಾತು ಅರಳು ಹುರಿದಂತೆ. ಈತ ಕೈಯಲ್ಲಿ ಇಕ್ಕಳ ಮಾದರಿಯ ಸಣ್ಣ ಉಪಕರಣ ಹಿಡಿದರೆ ಸಾಕು ಹಳ್ಳಿ, ಪಟ್ಟಣ ಇತ್ಯಾದಿ ಹಿಡಿದು ಅವರ ಪಕ್ಕ ಅಷ್ಟೇ ಸರಸರ ಜನರು ಬೇಗಾವರಿಗೆ ಬರುತ್ತಾರೆ. ಎದುರು ಕುಳಿತ ಗಿರಾಕಿಯ ಜೊತೆ ಹರಟುತ್ತಾ, ತಲೆಯ ಮೇಲೆ ಟವೆಲ್ ಹೊದೆಸುವ ಈ ವೃದ್ಧ 'ಡಾಕ್ಟರ್' ಆತನನ್ನು ಬೇರೆಯೇ ಲೋಕಕ್ಕೆ ಒಯ್ಯುತ್ತಾನೆ.

ಮಾತೊಂದರಷ್ಟು ಹೊತ್ತು ಅಷ್ಟೇ. ಕುಳಿತ ವ್ಯಕ್ತಿಯ ತಲೆಯನ್ನು ಒಂದೆರಡು ಬಾರಿ ಗಲಗಲ ಅತ್ತಿತ್ತ ಅಲುಗಾಡಿಸುವ ವೃದ್ಧ ಒಮ್ಮೆಲೆ ಇಕ್ಕಳವನ್ನು ಗಿರಾಕಿಯ ಬಾಯಿಯ ಒಳಕ್ಕೆ ಹಾಕುತ್ತಾನೆ. ನಿಮಿಷಾರ್ಧದಲ್ಲಿ ವ್ಯಕ್ತಿಯ ಬಾಯೊಳಗಿನ ಹಲ್ಲನ್ನು ತೆಗೆದುಕೊಂಡು ಇಕ್ಕಳ ಹೊರಕ್ಕೆ ಬರುತ್ತದೆ. ಅದು ತನ್ನದೇ ಹಲ್ಲು ಎಂಬುದನ್ನು ನಂಬಲು ಕೂಡಾ ಆ ವ್ಯಕ್ತಿಗೆ ಕಷ್ಟವಾಗುತ್ತದೆ.

ಔಷಧ ಹಚ್ಚದೆ, ಅರಿವಳಿಕೆಯ 'ಇಂಜೆಕ್ಷನ್' ಕೊಡದೆ, ಒಂದಿಷ್ಟು ಕೂಡಾ ನೋವಿಲ್ಲದಂತೆ ಈ ರೀತಿ ಹಲ್ಲು ಕೀಳುವ ಈ ಹಿರಿಯರ ಹೆಸರು ಬಸವಣ್ಣೆಪ್ಪ ಸಂಗಪ್ಪ ರಾಮಣ್ಣವರ. ಮೂಲತಃ ಬೆಳಗಾವಿ ಜಿಲ್ಲೆ ಸವದತ್ತಿ ಬಳಿ ಮುರಗೋಡದ ನಿವಾಸಿಯಾದ ಇವರಿಗೆ 'ನೋವಿಲ್ಲದೆ' ಹಲ್ಲು ತೆಗೆಯುವ ವಿದ್ಯೆ ಲೀಲಾಜಾಲ.

ಅದು 50 ವರ್ಷ ಹಿಂದಿನ ಕಥೆ. ಬಸವಣ್ಣೆಪ್ಪ ಸಂಗಪ್ಪ ರಾಮಣ್ಣವರಿಗೆ ಚಿಕ್ಕವಯಸ್ಸಿನಲ್ಲೇ ಮ್ಯಾಜಿಕ್‌ನಲ್ಲಿ ಆಸಕ್ತಿ. ಅಂದಿನ ಕಾಲದ 3ನೇ ತರಗತಿವರೆಗಷ್ಟೇ ಓದಿದ್ದ ಈ ಹುಡುಗ ಸಣ್ಣ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡು ತಾಯಿಯ ಆಶ್ರಯದಲ್ಲೇ ಬೆಳೆದು ಮದುವೆಯ ನಂತರ ಆಯುರ್ವೇದ ಅಧ್ಯಯನ ಮಾಡಿ 'ವೈದ್ಯ ವಿಶಾರದ ಆಯುರ್ವೇದ ಭೂಷಣ್' ವೈದ್ಯಕೀಯ ಪದವಿ ಪಡೆದು ನಂತರ ಎಲ್‌ಐಎಮ್‌ಎಸ್ ಎಂಬ ಡಿಪ್ಲೊಮಾ ಪದವಿಯನ್ನೂ ಗಳಿಸಿ, ಸಣ್ಣ ಪ್ರಮಾಣದ ವೈದ್ಯ ವೃತ್ತಿ ನಿರತರಾಗಿದ್ದರು.

ಇದೇ ಸಮಯದಲ್ಲಿ ಮುಂಬೈಯ ಡಾ. ಕಿಶೋರದಾಸ ಗುಪ್ತ ಎಂಬುವರು 'ನೋವಿಲ್ಲದೆ ಹಲ್ಲು ತೆಗೆಯುವ ವಿದ್ಯೆಯನ್ನು' ಅಂಚೆಯಲ್ಲಿ ಕಲಿಯಬಯಸುವವರಿಗೆ ಕಲಿಸುವುದು ಎಂಬ ಸಣ್ಣ ಜಾಹಿರಾತೊಂದು ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಡಾ. ಗುಪ್ತ ಗಾಂಧಿ ಅನುಯಾಯಿ. ಸುಲಭದಲ್ಲಿ ಹಲ್ಲು ತೆಗೆಯುವ ವಿದ್ಯೆ ಹೆಚ್ಚು ಜನರಿಗೆ ತಿಳಿದರೆ ಒಳ್ಳೆಯದೆಂದು ಕಲಿಸಲು ಮುಂದಾಗಿದ್ದರು.

'ನೋಡಿಯೇ ಬಿಡೋಣ' ಎಂದ ರಾಮಣ್ಣವರ ಹುಮ್ಮಸ್ಸಿಗೆ ದೊರೆಯುತ್ತಿದ್ದ ಹಲ್ಲುಗಳು ಬೇಡ



ಡಾ. ರಾಮಣ್ಣವರ